ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಹಿಂದಿನ ಸಾಲಿನ ನಷ್ಟವನ್ನು ಮುಂದಿನ ಸಾಲಿನ ಆದಾಯದಲ್ಲಿ ಕಳೆಯುವುದಕ್ಕಾಗುವುದಿಲ್ಲ. ಯಾವಾಗಲೂ ಈ ಲೆಕ್ಕಗಳನ್ನೂ ವರ್ಷ ವರ್ಷಕ್ಕೂ ಪ್ರತ್ಯೇಕವಾಗಿ ಇಡಬೇಕಾಗಿದೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಆ ವರ್ಷ ಲುಕ್ಸಾನಾಗುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—General slump and several other factors ಎಂದು ತಿಳಿಸಿದ್ದೇನೆ.

ಶ್ರೀ ಯು. ಎಂ. ಮಾದಪ್ಪ.—ಈ ಲುಕ್ಸಾನನ್ನು ಕೂಡಿಸಿಕೊಳ್ಳಲು ಸರ್ಕಾರದವರು ಏನಾದರೂ ಕಾರ್ಯಕ್ರಮ ಕೈಗೊಂಡಿದ್ದಾರೆಯೇ ?

Mr. SPEAKER.—There is the answer.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾನನ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲಿ ತಯಾರಿಸಿದ ಸಾಮಾನುಗಳನ್ನು ಸರ್ಕಾರದವರು ಬಳಸುತ್ತಿದ್ದಾರೆಯೆ ?

Sri H. SIDDAVEERAPPA.—I want notice for that particular question.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗೆ ಅಲ್ಲಿ ತಯಾರಾದ ಸಾಮಾನುಗಳನ್ನು ಸರ್ಕಾರ ಉಪಯೋಗಿಸದಿರುವುದೇ ಈ ಲುಕ್ಸಾನಿಗೆ ಕಾರಣವಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಪ್ರಶ್ನೆಗೆ ಆಗಲೇ ಉತ್ತರ ಕೊಟ್ಟಿದ್ದೇನೆ. I will examine it.

ಶ್ರೀ ಎಚ್. ಎಸ್. ರುದ್ರಪ್ಪ.—ಇದನ್ನು ಒಂದು ಖಾಸಗಿ ಉದ್ಯಮವನ್ನಾಗಿ ಪರಿವರ್ತಿಸಬೇಕೆಂಬ ಆಲೋಚನೆಯೇನಾದರೂ ಇದೆಯೇ ?

Sri H. SIDDAVEERAPPA.—That is also under consideration.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗೆ ಯಾರಾದರೂ ಮುಂದೆ ಬಂದರೆ, ಅದಕ್ಕೆ ಅವಕಾಶಕೊಡುತ್ತೀರಾ ?

Sri H. SIDDAVEERAPPA.—I want notice to answer that.

Steps to reduce unemployment among educated persons.

Q.—210. Sri H. S. RUDRAPPA (Honnali) :—

Will the Government be pleased to state :—

(*a*) the number of unemployed educated people in the State ;

(*b*) whether any steps have been taken by them to reduce unemployment of educated persons ;

(*c*) if so, the steps taken in this direction ?

A.—Sri Kadidal MANJAPPA (Minister for Revenue and Public Works) :—

(*a*) Information is not available The total number of unemployed educated persons on the Live Register of the Employment Exchange is however 2,624.

(*b*) Yes. As far as possible.

(*c*) The vacancies under Government are advertised in the *Mysore Gazette* and the unemployed educated persons appointed as per their chance in consultation with the Public Service Commission if they apply for the same. Approved lists for various kinds and classes of appointments are also issued by the Public Service Commission after calling for applications.

In addition to this the following steps are taken by the Employment Exchange to reduce unemployment of educated persons :—

(i) the particulars of highly qualified personnel are circulated among the prominent employers in the State to consider their cases if required by them ;

(ii) particulars of the retrenched/surplus class I and II officers of Government of India are furnished to the Central Employment Co-ordination Officer, New Delhi, to find them suitable appointments which are reserved by the Union P. S. C. for such personnel ;

(iii) suitable applicants are recommended against the vacancies outside the State on the basis of Central vacancy list and Regional vacancy list ;

(iv) suitable applicants are informed of every opportunity and are advised to apply.

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ತಾವು employment exchangeನಲ್ಲಿ ರಿಜಿಸ್ಟ್ರಾಗಿರುವ ತಕ್ಕ ಜನರ ಸಂಖ್ಯೆಯನ್ನೇನೋ ತಿಳಿಸಿದ್ದೀರಿ. ಆದರೆ ಹಾಗೆ ಹೆಸರುಗಳನ್ನು ರಿಜಿಸ್ಟ್ರು ಮಾಡಿಸಿಕೊಳ್ಳದೆ ಇರುವವರ ಸಂಖ್ಯೆ ಎಷ್ಟಿರಬಹುದೆಂಬುದನ್ನು ಹೇಳುವುದಕ್ಕೆ ಸಾಧ್ಯವಿದೆಯೇ ?

Mr. SPEAKER.—There is the answer : "Information is not available.

ಶ್ರೀ ಎಚ್. ಎಸ್. ರುದ್ರಪ್ಪ.—ಇವರುಗಳಿಗೆ ತಾವು ಸರ್ಕಾರಿ ಉದ್ಯಮಗಳಲ್ಲಿಯೂ ಮತ್ತು ಖಾಸಗಿಯವರ ಉದ್ಯಮಗಳಲ್ಲಿಯೂ ಸೇರಿಸಿದನಂತರ ಉಳಿಯುತಕ್ಕವರಿಗೆ ಬೇರೆ ಅನುಕೂಲತೆಗಳನ್ನೇನಾದರೂ ಕಲ್ಪಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಲ್ಪಿಸಿದ್ದೇವೆ. ಆದರೆ ಇವರಲ್ಲಿ ಒಬ್ಬೊಬ್ಬರು ಒಂದೊಂದು ತರಹ ಕೆಲಸವನ್ನು ಅಪೇಕ್ಷೆಮಾಡುತ್ತಾರೆ. ಆದಕಾರಣ ಎಲ್ಲರಿಗೂ ಒಂದೇ ಉದ್ಯಮದಲ್ಲಿ ಅವಕಾಶನೀಡಲು ಆಗುವುದಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಮರೆನಾಡಿನಲ್ಲಿ 20 ಸಾವಿರ ಎಕರೆ ಪ್ರದೇಶವನ್ನು ಖಾನಸರಾಗಿಟ್ಟಿರುವ ಕಡೆಗೆ, ಇವರು ಬಂದು ಅಲ್ಲಿ ನೆಲೆಸುವಂತೆ ಮಾಡುವುದಕ್ಕೆ ಸಾಧ್ಯವಿಲ್ಲವೇ?

Sri Kadidal MANJAPPA.—ಆಗುತ್ತದೆ. Unless our educated men realise that there is dignity in every labour it is not possible to rehabilitate them and solve this problem easily.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗಾದರೆ ಇವರಿಗೂ ಏನಾದರೂ ಜಪಾನು ಮುಂತಾದುವುಗಳನ್ನು ಮುಫತ್ತಾಗಿಕೊಡಬೇಕೆಂದು ಕೇಳಿದರೆ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಬರುವುದೇ ಇಲ್ಲ; ನೀವು ಹೇಳುವುದುಬಹಳ ಅಪರೂಪ.

ಶ್ರೀ ಎಚ್. ಎಸ್. ರುದ್ರಪ್ಪ.—ಬಂದರೆ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಊಹೆಯ ಪ್ರಶ್ನೆಯಾಯಿತು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈಗ ಕೆಲವು ಆಫೀಸುಗಳಲ್ಲಿ ರಿಟ್ರೆಂಚ್‌ಮೆಂಟ್ ಆಗಿ ಅನೇಕ ಜನರು ಕೆಲಸದಿಂದ ನಿವೃತ್ತರಾಗಿರುವುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಜನ ಆಗಿಲ್ಲ; ಕೆಲವರು ಆಗಿರಬಹುದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಸಾವಿರಾರು ಆಗಿದ್ದಾರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಸಾವಿರಾರು ಜನರು ಇಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರೆಲ್ಲಾ re-employ ಆಗುವುದಕ್ಕೆ ಏನು ಏರ್ಪಾಡು ಮಾಡಿರುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಹೇಳಿದೆನಲ್ಲಾ; ನಮ್ಮಲ್ಲಿ ಕೆಲಸಗಳೇನೋ ಇವೆ; ಆದರೆ ಅವರಿಗೆ ಒಂದು ವಿಧವಾದ ಕೆಲಸಗಳೇ ಬೇಕು. ಅವರಿಗೆ ಬೇಕಾಗಿರತಕ್ಕ ಕೆಲಸಗಳನ್ನೇ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಐದಾರು ವರ್ಷಗಳು ಕೆಲಸಮಾಡಿರುವವರನ್ನೂ ತಾವು ರಿಟ್ರೆಂಚ್‌ಮಾಡಿ ಕಳುಹಿಸಿದ್ದೀರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಐದಾರು ವರ್ಷ ಕೆಲಸ ಮಾಡುತ್ತಾ ಖಾಯಂ ಆಗಿರುವವರನ್ನು ಕಳುಹಿಸಿಲ್ಲ.

ಶ್ರೀ ಎಂ. ಲಿಂಗಣ್ಣ.—2,000 ಜನ ಮಿಲಿಟರಿ ಎಕ್ಸ್‌ಸರ್ವಿಸ್ ಸೈನಿಕರೂ ಇಲ್ಲಿ ಕೊಟ್ಟಿರುವ ಸಂಖ್ಯೆಯಲ್ಲಿ ಸೇರಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ರಾಚಯ್ಯ.—ಮಿಲಿಟರಿ ರಿಟ್ರೆಂಚ್ಡ್ ಆಫೀಸರುಗಳಿಗೆ, ಜಪಾನು ಕೊಡುವುದರಲ್ಲಿ, ಅವರಿಗೆ ಪ್ರೈಯಾರಿಟಿ ಕೊಡಬೇಕೆಂದು ಇತ್ತೀಚೆಗೆ ಸರ್ಕಾರಿ ಹುಕ್ಕುಮನ್ನೇನಾದರೂ ಹೊರಡಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥಾದ್ದೇನೂ ಇಲ್ಲ.

Contract for the Middle School Building at Heggere Village in Tumkur Taluk.

Q.—641. Sri T. N. MUDLAGIRI GOWDA (Kunigal).—

Will the Government be pleased to state:—

(*a*) whether a building for the Middle School at Heggere Village in Tumkur Taluk has been sanctioned;

(*b*) if so, in which year;

(*c*) the estimated amount for the said building;

(*d*) whether tenders have been called for;

(*e*) the names of persons who had given tenders;

(*f*) the name of person to whom the contract has been given?

A.—Sri Kadidal MANJAPPA (Minister for Revenue and Public Works).—

(*a*) Yes.
(*b*) In December 1952.
(*c*) Rs. 13,200.
(*d*) No.
(*e*) Does not arise in view of reply to question (*d*).
(*f*) Sri K. V. Puttagangiah, Tumkur.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಹೆಗ್ಗೆರೆ ಗ್ರಾಮಸ್ಥರು ಈ ಕಟ್ಟಡಕ್ಕಾಗಿ ಕಂಟ್ರಿಬ್ಯೂಷನ್ ಏನಾದರೂ ಕೊಟ್ಟಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಸರ್ಕಾರದ ಹಣ ಎಷ್ಟು, ಗ್ರಾಮಸ್ಥರು ಕೊಡಬೇಕಾದ ಹಣ ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಕೊಟ್ಟಿದ್ದರೆ ಹೇಳುತ್ತಿದ್ದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಎಷ್ಟು ಸಾವಿರ ರೂಪಾಯಿಗಳ ಮೇಲ್ಪಟ್ಟಿನ ಕೆಲಸವಾಗಿದ್ದರೆ ಟೆಂಡರ್ ಕರೆಯಬೇಕೆಂದಿದೆ? ಟೆಂಡರ್ ಕರೆಯುವುದರಲ್ಲಿ ಸರ್ಕಾರದ ನೀತಿಯೇನು?

ಶ್ರೀ ಕಡಿದಾಳ್ ಮಂಜಪ್ಪ.—ಅದು ಮೊತ್ತದ ಮೇಲೆ ಹೋಗುವುದಿಲ್ಲ. ಸಮಯ ಸಂದರ್ಭವನ್ನು ಅವಲಂಬಿಸುತ್ತದೆ. Speedy execution of the work and the reasonable rate quoted by the Piece-worker or the person who is given the work.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಎಷ್ಟು ಮೊತ್ತದ್ದು ಆಗಿದ್ದರೂ ಸರ್ಕಾರದವರು ಹೇಗೆ ಬೇಕಾದರೂ ಕೆಲಸವನ್ನು ನಡೆಸಬಹುದೇ?